3. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಸೋಂತ ತಾ: ಗುಲ್ಬರ್ಗಾ ಜಿಲ್ಲೆ
4. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಮಹಾಂಗಾವ್ ತಾ: ಗುಲ್ಬರ್ಗಾ ಜಿಲ್ಲೆ
5. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಎ.ಕೆ. ಸಲಗರ, ಆಳಂದ ಗುಲ್ಬರ್ಗಾ ಜಿಲ್ಲೆ
6. ಸರ್ಕಾರಿ ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಅಂಬಲಗಾ, ಆಳಂದ ತಾ: ಗುಲ್ಬರ್ಗಾ ಜಿಲ್ಲೆ

ಸಮಾಜ ಕಲ್ಯಾಣ ಇಲಾಖೆ

ಹೌದು, ಆಳಂದ ತಾ: ಖಜಜಾರಿ ಮತ್ತು ನರೋಣಿ ಎಂಬಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಜಿಲ್ಲೆಯಿಂದ ಪ್ರಸ್ತಾವನೆ ಬಂದಿದ್ದು, ಪರಿಶೀಲನೆಯಲ್ಲಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – ಇಲ್ಲ
ಹಿಂದುಳಿದ ವರ್ಗಗಳ ಇಲಾಖೆ – ಇಲ್ಲ

ಇ) ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾವನೆಗಳು ಬಂದಲ್ಲಿ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿಯಮಾನುಸಾರ
ಹಿಂದುಳಿದ ವರ್ಗಗಳ ಇಲಾಖೆ ಪರಿಶೀಲಿಸಲಾಗುವುದು

ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗದ ಆಯೋಗದ ಮೀಸಲಾತಿ

4195 (4916) : ಶ್ರೀ ರೇವೂನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗದ ಆಯೋಗ ಸ್ಥಾಪಿಸುವ ಮೊದಲು ಇದ್ದಂತಹ ಮೀಸಲಾತಿ ನೀತಿ ಏನು; ಯಾವ ಆಧಾರದಲ್ಲಿ ಈ ಸೌಲಭ್ಯ ನೀಡಲಾಗುತ್ತಿತ್ತು; (ವಿವರ ಒದಗಿಸುವುದು)

ಆ) ಈಗಿನ ಮೀಸಲಾತಿ ಅನುಸಾರ ಉದ್ಯೋಗಕ್ಕೆ ಹಾಗೂ ವ್ಯಾಸಂಗಕ್ಕೆ ಅನುಸರಿಸುವ ಮಾನದಂಡಗಳೇನು;

ಇ) ಆದಾಯ ಮಿತಿಯನ್ನು ಎಷ್ಟಕ್ಕೆ ನಿಗದಿಪಡಿಸಿಲಾಗಿದೆ; (ಪ್ರವರ್ಗಗಳವಾರು ವಿವರ ನೀಡುವುದು)

ಈ) ಹಿಂದುಳಿದವರಲ್ಲಿ ಆರ್ಥಿಕವಾಗಿ ದುರ್ಬಲರಾದವರಿಗೆ ವಿಶೇಷ ಮೀಸಲಾತಿ ಸೌಲಭ್ಯ ಕಲ್ಪಿಸಲು ಸರ್ಕಾರ ಆಲೋಚಿಸುವುದೇ;

ಉ) ಅಂತಹ ಜಾತಿಗಳ ವಿವರ ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಲು ಮೊದಲು ರಾಜ್ಯದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಕೆಳಕಂಡಂತೆ ಇರುತ್ತದೆ.

1. ಜಸ್ಟೀಸ್ ಲೆಸ್ಲಿ ಮಿಲ್ಲರ್ ಸಮಿತಿ (1918)

ಶೇಕಡಾ 75 ಮೀಸಲಾತಿಯನ್ನು ಶಿಫಾರಸ್ಸು ಮಾಡಿದ್ದು 1921ರಲ್ಲಿ ಆದೇಶ ಹೊರಡಿಸಲಾಗಿದೆ.

2. ನಾಗನಗೌಡ ಆಯೋಗ (1961)

ಹಿಂದುಳಿದ ವರ್ಗಗಳನ್ನು ವರ್ಗೀಕರಿಸಿ–1 ಹಿಂದುಳಿದ ವರ್ಗಗಳು

2) ಅತೀ ಹಿಂದುಳಿದ ವರ್ಗಗಳು ಎಂದು ವಿಭಜಿಸಿ ಕ್ರಮವಾಗಿ ಶೇಕಡಾ 25 ಮತ್ತು ಶೇಕಡಾ 22ರಷ್ಟು ಮೀಸಲಾತಿ ನೀಡಲಾಗಿತ್ತು.

3. ಹಾವನೂರು ಆಯೋಗ (1975)ವು ಹಿಂದುಳಿದ ವರ್ಗಗಳನ್ನು ವರ್ಗೀಕರಿಸಿ ಕೆಳಕಂಡಂತೆ ಮೀಸಲಾತಿ ನೀಡಲಾಗಿತ್ತು.

ಹಿಂದುಳಿದ ವರ್ಗಗಳು	20%	18%
ಹಿಂದುಳಿದ ಜಾತಿಗಳು	10%	10%
ಹಿಂದುಳಿದ ಬುಡಕಟ್ಟು	05%	05%
ಹಿಂದುಳಿದ ವಿಶೇಷ ಗುಂಪು	15%	15%
ಒಟ್ಟು	50%	48%

4. ವೆಂಕಟಸ್ವಾಮಿ ಆಯೋಗ (1986) ಶಿಫಾರಸ್ಸನ್ನು ಸರ್ಕಾರವು ಒಪ್ಪಿರುವುದಿಲ್ಲ. ಮೀಸಲಾತಿಯನ್ನು ಶೇಕಡಾ 50ಕ್ಕೆ ಮಿತಿಗೊಳಿಸಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು.

ಚೆನ್ನಪ್ಪರೆಡ್ಡಿ ಆಯೋಗ (1990) ಮೀಸಲಾತಿಯನ್ನು ಶೇಕಡಾ 50ಕ್ಕೆ ಮಿತಿಗೊಳಿಸಿ ದಿನಾಂಕ: 17.9.94ರಂದು ಆದೇಶ ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿರುತ್ತದೆ.

ಪ್ರವರ್ಗ–1	4%
ಪ್ರವರ್ಗ–2ಎ	15%
ಪ್ರವರ್ಗ–2ಬಿ	4%
ಪ್ರವರ್ಗ–3ಎ	4%
ಪ್ರವರ್ಗ–3ಬಿ	5%
ಪರಿಶಿಷ್ಟ ಜಾತಿ	15%
ಪರಿಶಿಷ್ಟ ವರ್ಗ	3%
ಒಟ್ಟು	50%

ಅ) ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಶೈಕ್ಷಣಿಕ ಹಾಗೂ ಸಾಮಾಜಿಕ ಹಿಂದುಳಿದಿರುವಿಕೆ ಆಧಾರದ ಮೇಲೆ ನೀಡಲಾಗುತ್ತದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ–1ರಲ್ಲಿ ಇರುವ ಹಿಂದುಳಿದ ವರ್ಗದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಆದಾಯದ ಮಿತಿ ಇರುವುದಿಲ್ಲ. ಆದರೆ ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ರವರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ 2 ಲಕ್ಷ ರೂ.ಗಳ ವಾರ್ಷಿಕ ಆದಾಯದ ಮಿತಿಯನ್ನು ನಿಗದಿಪಡಿಸಲಾಗಿದೆ. ಮಕ್ಕಳ ತಂದೆ ತಾಯಿಗಳು/ಪೋಷಕರು ಸರ್ಕಾರಿ ಸೇವೆಯಲ್ಲಿ ಸಮೂಹ–ಎ ಮತ್ತು ಸಮೂಹ–ಬಿ ವರ್ಗದ ಅಧಿಕಾರಿಗಳಾಗಿದ್ದು (ರೂ. 6600–11200) ವೇತನ ಶ್ರೇಣಿ ಹಾಗೂ ಅದಕ್ಕಿಂತಲೂ ಮೇಲ್ಮಟ್ಟು ವೇತನ ಪಡೆಯುತ್ತಿದ್ದಲ್ಲಿ ಅಂತಹವರ ಮಕ್ಕಳು ಮೀಸಲಾತಿಗೆ ಅರ್ಹರಿರುವುದಿಲ್ಲ. ಇದೇ ರೀತಿ ಸಾರ್ವಜನಿಕ ಉದ್ದಿಮೆ , ಖಾಸಗಿ ಕಾರ್ಖಾನೆ/ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮೇಲ್ಕಂಡಂತೆ ವೇತನ ಪಡೆಯುವ ಎ ಮತ್ತು ಬಿ ವರ್ಗದ ಅಧಿಕಾರಿಗಳ ಮಕ್ಕಳು ಸಹ ಮೀಸಲಾತಿಗೆ ಒಳಪಡುವುದಿಲ್ಲ.

ಈ) ಈ ರೀತಿಯ ಯಾವುದೇ ಪ್ರಸ್ತಾಪನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪ್ರಾಣಿಗಳಿಗೆ ನಡೆಸಿದ ಚಿಕಿತ್ಸೆಗೆ ಸರಕಾರದಿಂದ ಶುಲ್ಕ ನಿಗದಿ ಪಡಿಸುವುದರ ಬಗ್ಗೆ

4196 (4910) : ಶ್ರೀ ಯು.ಆರ್. ಸಭಾಪತಿ (ಉಡುಪಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಣಿಗಳಿಗೆ ಪಶುವೈದ್ಯರುಗಳು ನಡೆಸುವ ಚಿಕಿತ್ಸೆ ಶಸ್ತ್ರ ಚಿಕಿತ್ಸೆ ಹಾಗೂ ಔಷಧಗಳಿಗೆ ಶುಲ್ಕ ವಿಧಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಅದರ ವಿವರಗಳೇನು?

ಆ) ಈ ಶುಲ್ಕ ನಿಗದಿಪಡಿಸಿರುವ ಔಚಿತ್ಯವೇನು?

ಇ) ಮನುಷ್ಯರಿಗೆ ಸರಕಾರ ಉಚಿತ ಚಿಕಿತ್ಸೆ ನೀಡುತ್ತಿರುವಾಗ ಪ್ರಾಣಿಗಳ ಚಿಕಿತ್ಸೆಗೆ ಶುಲ್ಕ ನಿಗದಿಪಡಿಸಿರುವುದು ಸರಿಯೇ:

ಈ) ಸರಕಾರದ ಈ ನಿಲುವಿಗೆ ಸಾರ್ವತ್ರಿಕವಾಗಿ ಪ್ರತಿಭಟನೆ ಬಂದಿರುವುದು ಗಮನಕ್ಕೆ ಬಂದಿದೆಯೇ:

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21-7-2003ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ.

ಆ) ಮೇಲೆ ವಿವರಿಸಿದಂತೆ ಹಿಂತೆಗೆದುಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಬೆಳೆ ಮೊತ್ತ ಪಾವತಿಸುವುದು

4197 (4912) : ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ, ಸಹಕಾರಿ ಮತು ಖಾಸಗಿ ಕ್ಷೇತ್ರದಲ್ಲಿರುವ ಸಕ್ಕರೆ ಕಾರ್ಖಾನೆಗಳು ಎಷ್ಟು ಮತ್ತು ಯಾವುವು? (ವಿವರ ಒದಗಿಸುವುದು);

ಆ) ಈ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾದ ಮೊತ್ತ ಎಷ್ಟು? (ಕಾರ್ಖಾನೆವಾರು ವಿವರ ಒದಗಿಸುವುದು):

ಇ) ಪ್ರಸ್ತುತ ಈ ಕಾರ್ಖಾನೆಗಳಲ್ಲಿ ದಾಸ್ತಾನು ಇರುವ ಸಕ್ಕರೆ ಪ್ರಮಾಣವೆಷ್ಟು? ಮತ್ತು ಅವುಗಳ ಮೌಲ್ಯ ಎಷ್ಟು: (ಕಾರ್ಖಾನೆವಾರು ವಿವರ ಒದಗಿಸುವುದು):

ಈ) ಈ ದಾಸ್ತಾನಿನಲ್ಲಿರುವ ಸಕ್ಕರೆಯನ್ನು ಹರಾಜು ಹಾಕಿ ಕಬ್ಬು ಬೆಳೆಗಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತವನ್ನು ಮರುಪಾವತಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 42 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 20 ಸಹಕಾರಿ ಕ್ಷೇತ್ರದಲ್ಲಿ 2 ಸಾರ್ವಜನಿಕ ಕ್ಷೇತ್ರದಲ್ಲಿ, 1 ಜಂಟಿ ಕ್ಷೇತ್ರದಲ್ಲಿ ಹಾಗೂ 19 ಸಕ್ಕರೆ ಕಾರ್ಖಾನೆಗಳು ಖಾಸಗಿ ಕ್ಷೇತ್ರದಲ್ಲಿವೆ. ವಿವರ ಅನುಬಂಧ(1)ರಲ್ಲಿ ಕೊಡಲಾಗಿದೆ.